ಓಎಸ್ ನಂ. : 1109/2017, ಪಿಡಬ್ಲೂ-1

ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 17.01.2024

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಕೆ.ವಿ.ಎ ವಕೀಲರಿಂದಃ</u>**

ನಮ್ಮ ಕುಟುಂಬದ ವಂಶಾವಳಿಯಲ್ಲಿ ಜಾಲವ್ವ ಎಂಬ ಹೆಸರಿನ ಯಾವುದೇ ವ್ಯಕ್ತಿ ಇರುವುದಿಲ್ಲ. 2 ನೇ ಪ್ರತಿವಾದಿಯ ತಂದೆ ಹೆಸರು ಕನಕನಗೌಡ ತಂದೆ ಭೀಮನಗೌಡ ಪೋಲೀಸಪಾಟೀಲ ಎಂದರೆ ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳು 2 ನೇ ಪ್ರತಿವಾದಿಯ ತಂದೆ ಮನೆತನದಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ.

ಜಾಲವ್ವ ಈಕೆಯು ದಿನಾಂಕ 28.08.2017 ರಂದು ಮೃತ್ಯು ಪತ್ರದ ಮುಖಾಂತರ ತನ್ನ ಆಸ್ತಿಯನ್ನು ಅಂದರೆ ಸರ್ವೆ ನಂ. 21 ಹಿಸ್ಸಾ 1 ವಿಸ್ತೀರ್ಣ 6 ಎಕರೆ 25 ಗುಂಟೆಯನ್ನು ತನ್ನ ಮೊಮ್ಮಗನಾದ ಮಾಸಪ್ಪನ ಹೆಸರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-14 ಸರ್ವೆ ನಂ. 9/4 ಬಿ ವಿಸ್ತೀರ್ಣ 1 ಎಕರೆ 13 ಗುಂಟೆ ಜಮೀನು ದೊಡ್ಡನಗೌಡ ತಂದೆ ಮಾಸನಗೌಡ ಪೋಲೀಸಪಾಟೀಲ ಹೆಸರಿನಲ್ಲಿದೆ ಎಂದರೆ ಸರಿ. ಆ ಜಮೀನಿಗೆ ನಮ್ಮದು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ದೊಡ್ಡನಗೌಡ ನನ್ನ ಸಹೋದರ ಇರುತ್ತಾನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಹಾಗೇಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-15 ಸರ್ವೆ ನಂ. 9/4 ಬಿ ವಿಸ್ತೀರ್ಣ 1 ಎಕರೆ 14 ಗುಂಟೆ ಕಲ್ಲನಗೌಡ ತಂದೆ ಮಾಸನಗೌಡನ ಹೆಸರಿನಲ್ಲಿದ್ದು ಹಾಗೂ ನಿಪಿ-16 ಸರ್ವೆ ನಂ. 20/* ವಿಸ್ತೀರ್ಣ 12 ಗುಂಟೆ ಜಮೀನು ಬಸನಗೌಡ ತಂದೆ ಕನಕನಗೌಡ ಪೋಲೀಸಪಾಟೀಲ ಹೆಸರಿನಲ್ಲಿದೆ ಎಂದರೆ ಸರಿ. ಈ ಎರಡೂ ಜಮೀನಿಗೆ ನಾನು ಸಹ ಮಾಲೀಕನಿರುತ್ತೇನೆ. ನಿಪಿ-17 ರಲ್ಲಿ ತೋರಿಸಿದ ಜಮೀನುಗಳಿಗೆ ನಮ್ಮ ಮಾಲ್ಕಿ ಹಕ್ಕು ಇರುತ್ತದೆ. ಶಾಲಾ ದಾಖಲಾತಿಗಳನ್ನು ನೀಡಲು ಅರ್ಜಿಯನ್ನು ಕಬ್ಬರಗಿ ಪ್ರಾಥಮಿಕ ಶಾಲೆಗೆ ನೀಡಿದ್ದೇವು ಅದರಂತೆ ಅವರು ನಿಪಿ-18 ನೀಡಿರುತ್ತಾರೆ. ಸದರಿ ಅರ್ಜಿ ಮುಖಾಂತರ ನಮ್ಮ ತಂದೆ ಸೇರಿ ಒಟ್ಟು 24 ಜನರ ಮಾಹಿತಿ ಕೇಳಿದ್ದೇವು. ಅರ್ಜಿಯಲ್ಲಿ ಆ ವ್ಯಕ್ತಿಗಳ ಶಾಲಾ ದಾಖಲೆಯ ಸಂಖ್ಯೆ ಮತ್ತು ಜನ್ಮ ದಿನಾಂಕದ ವಿವರ ನೀಡಿರಲಿಲ್ಲ. ನಿಪಿ-18 ರಲ್ಲಿ ಮೊದಲನೆಯ ಹೆಸರು ಕನಕನಗೌಡ ಭೀಮನಗೌಡ ಪೋಲೀಸಗೌಡ್ರ ಅಂದರೆ ನಮ್ಮ ದೊಡ್ಡಪ್ಪ ಇರುತ್ತಾರೆ. ಆತನ ಜನ್ಮ ದಿನಾಂಕದ ಬಗ್ಗೆ ಶಾಲೆ ದೃಡಿಕರಣ ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ. ಸದರಿ

ಕನಕನಗೌಡನ ಹೆಂಡತಿ ಹೆಸರು ಶಂಕ್ರಮ್ಮ. ಶಂಕ್ರಮ್ಮಳ ಶಾಲಾ ದಾಖಲೆ ಹಾಜರುಪಡಿಸಿಲ್ಲ ಆದರೆ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇವೆ.

ಮಾಸನಗೌಡ ತಂದೆ ಭೀಮನಗೌಡ ಪೋಲೀಸಪಾಟೀಲ ಎಂದರೆ ನಮ್ಮ ತಂದೆ. ಮಲ್ಲವ್ವ ಭೀಮನಗೌಡ ಪೋಲೀಸಪಾಟೀಲ ಎಂದರೆ ನಮ್ಮ ತಂದೆಯ ಸಹೋದರಿ. ನಿಪಿ-18 ನೀಡಲು ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ದಾವೆಗೆ ಅನುಕೂಲವಾಗುವಂತೆ ಶಾಲೆಯಿಂದ ಸದರಿ ಸುಳ್ಳು ದಾಖಲೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಕುಟುಂಬದ ಪೂರ್ವಜರಿಂದ ಬಂದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಯಾವತ್ತೂ ನಾನು ಹೇಳಿದ ನಮ್ಮ ಪೂರ್ವಜರು ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಂಶಾವಳಿಯನ್ನು ಹಾಜರುಪಡಿಸಿ ಅಸಲು ದಾವೆ ನಂ. 354/2016 ರಲ್ಲಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಜಾಲವ್ವ ಬರೆದುಕೊಟ್ಟ ಮೃತ್ಯು ಪತ್ರದ ಆಧಾರದ ಮೇಲೆ ಆಕೆ ತೀರಿಕೊಂಡ ನಂತರ ಸರ್ವೆ ನಂ. 21/1 ವಿಸ್ತೀರ್ಣ 6 ಎಕರೆ 25 ಗುಂಟೆಗೆ ಮಾಸಪ್ಪನೆ ಮಾಲೀಕನು ಮತ್ತು ಕಬ್ಜೆದಾರನು ಇರುತ್ತಾನೆ ಎಂದರೆ ಸರಿಯಲ್ಲ. ಆ ಜಮೀನಿಗೆ ತಾನೆ ಮಾಲೀಕನೆಂದು ಕೇಳಿ ಅಸಲು ದಾವೆ 557/2019 ನ್ನು ಮಾಸಪ್ಪನು ಇದೆ ನ್ಯಾಯಾಲಯದಲ್ಲಿ ದಾವೆ ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು 3 ರಿಂದ 8 ನೇ ಪ್ರತಿವಾದಿಯರಿಂದ ಶಾಮೀಲ ಆಗಿ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಹಕ್ಕು ಇರುವುದಿಲ್ಲ ಅಂತಾ ಗೊತ್ತಿದ್ದರು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ